# ಹಾವಿನೊಡನಾಟ..



ಚಿಕ್ಕ ಹುಡುಗ ಹೆಬ್ಬಾವನ್ನು ಮೈತುಂಬಾ ಹಗ್ಗದಂತೆ ಸುತ್ತಿಕೊಂಡು ಅದರೊಡನೆ ಆಟವಾಡುವುದನ್ನು ಕಲ್ಪಿಸಿಕೊಳ್ಳುತ್ತೀರಾ? ಊಹೂಂ, ಸಾಧ್ಯವೇ ಇಲ್ಲ ಬಿಡಿ. ಆದರೆ ಕಾಂಬೋಡಿಯಾದ ಬಾಲಕ ವೋರ್ನ್ ಸ್ಯಾಂಬತ್‌ನಿಗೆ ಹುಟ್ಟಿದಾಗಿನಿಂದಲೂ ಬರ್ಮೀಸ್ ಜಾತಿಯ ಹೆಣ್ಣು ಹೆಬ್ಬಾವೇ ಒಡನಾಡಿ.

ಬರೋಬ್ಬರಿ 120 ಕಿಲೋ ಗ್ರಾಂ ತೂಕವಿರುವ ಭಾರೀ ಗಾತ್ರದ ಹೆಬ್ಬಾವಿಗೆ ಸರಿಸುಮಾರು ಈತನಷ್ಟೇ ವಯಸ್ಸು. ವೃತ್ತಿಯಲ್ಲಿ ರೈತನಾಗಿರುವ ತಂದೆ ಖೋರ್ನ್ ಸ್ಯಾಮ್ ಒಲ್ ಈ ಹೆಬ್ಬಾವಿಗಿಟ್ಟ ಹೆಸರು ಕೆಮರಾನ್. ಖ್ಮೆರ್ ಭಾಷೆಯಲ್ಲಿ ಇದರರ್ಥ ಅದೃಷ್ಟ ಎಂದು. ತಾಯಿ ಕಿಮ್ ಕನ್ನಾರ ಹೇಳುವ ಪ್ರಕಾರ ವೋರ್ನ್ ಸ್ಯಾಂಬತ್ ಮೂರು ತಿಂಗಳ ಕೂಸಿದ್ದಾಗ ಹಾಸಿಗೆಯ ಅಡಿಯಲ್ಲಿದ್ದ ಚಾಪೆಯ ಬಳಿ ಹೆಬ್ಬೆಟ್ಟಿನ ಗಾತ್ರದಷ್ಟಿದ್ದ ಹೆಬ್ಬಾವು ಮೊದಲ ಸಲ ಕಾಣಿಸಿಕೊಂಡಿತಂತೆ. ತಂದೆ ಇದನ್ನು ಎತ್ತಿ ಒಯ್ದು ದೂರದ ಪೊದೆಯಲ್ಲಿ ಬಿಟ್ಟು ಬಂದರೂ ಅದು ಮತ್ತೆ ಮನೆಗೇ ವಾಪಸ್ ಬಂದಿತಂತೆ. ಅಂದಿನಿಂದ ಅವರು ಅದನ್ನು ಸಾಕಲು ಪ್ರಾರಂಭ ಮಾಡಿದರಂತೆ. ಹಾಗಾಗಿ ಅದೂ ಕೂಡ ಅವರ ಮಗನೊಟ್ಟಿಗೇ ಬೆಳೆಯತೊಡಗಿತಂತೆ.

ಈ ಹೆಬ್ಬಾವಿಗೆ ಮಾಂತ್ರಿಕ ಶಕ್ತಿಯಿದ್ದು ಅದು ಯಾವುದೇ ಕೆಡುಕು ಸಂಭವಿಸದಂತೆ ಮನೆಯವರನ್ನೆಲ್ಲಾ ಕಾಪಾಡುತ್ತದೆ ಎಂದು ಅವರೆಲ್ಲಾ ಬಲವಾಗಿ ನಂಬಿದ್ದಾರೆ. ಆ ಹಾವಿಗಾಗಿ ಪ್ರತ್ಯೇಕ ಕೋಣೆಯನ್ನು ಬಿಟ್ಟುಕೊಟ್ಟಿದ್ದಾರೆ. ಮಗ ಹೆಬ್ಬಾವಿನೊಡನೆ ಸ್ನೇಹ ಬೆಳೆಸಿಕೊಂಡು ಸದಾ ಅದರೊಟ್ಟಿಗೇ ಆಟವಾಡುವುದಕ್ಕೆ ತಂದೆ ತಾಯಿಗಳಿಗೆ ಸ್ವಲ್ಪವೂ ಅಳುಕಿಲ್ಲ. ಅವರಿಬ್ಬರ ನಡುವೆ ವಿಶೇಷವಾದ ಬಂಧವಿದೆ. 'ನನ್ನ ಮಗ ತೆವಳಲು ಕಲಿಯುತ್ತಿರುವಾಲೇ ಅದರೊಡನೆ ಆಟ ಶುರು ಮಾಡಿದ್ದಾನೆ. ಅವರಿಬ್ಬರೂ ತೊಟ್ಟಿಲಲ್ಲಿ ಒಟ್ಟಾಗಿಯೇ ಮಲಗುತ್ತಿದ್ದರು' ಎನ್ನುವುದು ತಂದೆಯ ಮಾತು. ಸ್ಯಾಂಬತ್‌ನಂತೂ ಆ ಹೆಬ್ಬಾವು ತನ್ನ ಹೆಂಡತಿಯೇ ಎನ್ನುವಷ್ಟು ಅದನ್ನು ಪ್ರೀತಿಸುತ್ತಾನೆ ಮತ್ತು ಮುತ್ತನ್ನೂ ನೀಡುತ್ತಾನೆ. ಈಗ ಹೆಬ್ಬಾವಿಗೆ 11 ವರ್ಷವಾಗಿದ್ದು 6 ಮೀಟರ್ (ಸುಮಾರು 11 ಅಡಿ)ನಷ್ಟು ಉದ್ದವಿದೆ. ವಾರಕ್ಕೆ 10ಕಿ.ಗ್ರಾಂ ಚಿಕನ್ ಮತ್ತು ಬಾತುಕೋಳಿ ಕೆಮರಾನ್‌ನ ಆಹಾರ. ಬಹಳಷ್ಟು ಜನ ವನ್ಯಪ್ರಾಣಿ ರಕ್ಷಕರು, ಪೊಲೀಸ್ ಅಧಿಕಾರಿಗಳು, ಸಿನಿಮಾ ತಯಾರಕರು ಈ ಹೆಬ್ಬಾವನ್ನು ಸ್ಯಾಂಬತ್‌ನಿಂದ ಬಿಡಿಸಿಕೊಂಡು ಮೃಗಾಲಯದಲ್ಲಿ ಇರಿಸಲು ಪ್ರಯತ್ನಿಸಿದ್ದಾರಂತೆ. ಆದರೆ ಹೆಬ್ಬಾವಿನ ಹಣೆಗೆ ಮುತ್ತನ್ನಿಡುತ್ತಾ 'ಇವಳನ್ನು ನನ್ನಿಂದ ಬೇರ್ಪಡಿಸಿ ಕಸಿದುಕೊಂಡು ಹೋಗಲು ಯಾರಿಗೂ ಸಾಧ್ಯವೇ ಇಲ್ಲ' ಎನ್ನುತ್ತಾನೆ ಈ ಪೋರ.!

■ ಪ್ರಿಯಾಂಕ. ವಿ. ಹೆಚ್.

